ಶ್ರೀ ಕೆ. ಜಯಪ್ರಕಾಶ್ ಹೆಗಡೆ : 1978ರ ಪೂರ್ವದಲ್ಲಿ ಕುಳಿತಿದ್ದನ್ನು ರೆಗ್ಯುಲರೈಸ್ ಮಾಡಲಿಕ್ಕೆ ಒಂದು ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ಕಳಿಸಿದ್ದಾರೆ, ಅದಕ್ಕೆ ಅನುಮೋದನೆ ಸಿಕ್ಕಿದೆ. ಆದರೆ ಕೆಲವೊಂದು ರೈತರು 1978ರ ಪೂರ್ವದಲ್ಲಿ ಕುಳಿತವರ ಹೆಸರಿನ ದಾಖಲಾತಿ ಅವರ ಹತ್ತಿರ ಇದೆ. ಆದರೆ ಅವರ ಹೆಸರು ಕೇಂದ್ರ ಸರ್ಕಾರಕ್ಕೆ ಕಳುಹಿಸಿರುವ ಪಟ್ಟಿಯಲ್ಲಿ ಇಲ್ಲದೇ ತೊಂದರೆಗೆ ಈಡಾಗಿದ್ದಾರೆ. ಅಂತಹ ಜನರನ್ನು ಗುರುತಿಸಿ ಪುನಃ ಪಟ್ಟಿ ಕಳುಹಿಸಲಿಕ್ಕೆ ಪ್ರಯತ್ನ ಮಾಡುತ್ತೀರಾ? ಏಕೆಂದರೆ 1978ರ ಪೂರ್ವದಲ್ಲಿ ಕೆಲವರದ್ದು ಹೋಗಿದೆ. ಎಲ್ಲರದ್ದೂ ಹೋಗಿಲ್ಲ. ಯಾರ್ಯಾರ ಹೆಸರು ಬಿಟ್ಟು ಹೋಗಿದೆ ಅವರ ಹೆಸರುಗಳನ್ನು ಪುನಃ ಪರಿಶೀಲನೆ ಮಾಡುತ್ತೀರಾ?

ಶ್ರೀ ಕೆ.ಎಚ್. ರಂಗನಾಥ್ : ಆ ವಿಷಯ ಸರ್ಕಾರದ ಮುಂದೆ ಇಲ್ಲ.

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಇದು ಬಹಳ ಪ್ರಮುಖವಾದ ವಿಚಾರ ಇದೆ.

ಅಧ್ಯಕ್ಷರು : ನಿಮ್ಮ ಶಾಸಕರೇ ಐದು ಪ್ರಶ್ನೆಗಳನ್ನು ಕಳಿದುಕೊಳ್ಳಬೇಕಾಗುತ್ತದೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ನನ್ನದು ಒಂದೇ ವಿನಂತಿ. 1978ರ ಪೂರ್ವಕ್ಕೆ ಎಲ್ಲಾ ಅತಿಕ್ರಮಣದಾರರ ವಿಷಯವನ್ನು ಕೇಂದ್ರ ಸರ್ಕಾರಕ್ಕೆ ಕಳುಹಿಸಿದ್ದಾರಾ?

ಅಧ್ಯಕ್ಷರು : ಸರ್ವೋಚ್ಚ ನ್ಯಾಯಾಲಯದ ತೀರ್ಮಾನ ಆದಮೇಲೆ ನಾವು ಅದರ ಬಗ್ಗೆ ಆಲೋಚನೆ ಮಾಡುತ್ತೇವೆಂದು ಹೇಳಿದ್ದಾರೆ.

ಮೈಸೂರಿನಿಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ಕಛೇರಿಯನ್ನು ಹಂಪಿಗೆ ವರ್ಗಾಯಿಸುತ್ತಿರುವುದರ ಕುರಿತು

445 - ಶ್ರೀ ಶಂಕರಲಿಂಗೇಗೌಡ ಹೆಚ್.ಎಸ್. (ಚಾಮರಾಜ) : ಮಾನ್ಯ ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಂಸ್ಕೃತಿಕ ರಾಜಧಾನಿ ಮೈಸೂರಿನಿಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಕೇಂದ್ರ ಕಛೇರಿಯನ್ನು ಹಂಪಿಗೆ ಸ್ಥಳಾಂತರಿಸುವ ಸರ್ಕಾರದ ನಿರ್ಧಾರವನ್ನು ಕೈಬಿಡಬೇಕೆಂದು ಸರ್ಕಾರಕ್ಕೆ ಮನವಿಗಳು ಬಂದಿರುವುದು ನಿಜವೇ?

ಆ) ಹಾಗಿದ್ದಲ್ಲಿ ಸ್ಥಳಾಂತರದ ಬಗ್ಗೆ ಸರ್ಕಾರದ ಇತ್ತೀಚಿನ ನಿಲುವೇನು?

ಇ) ಕೇಂದ್ರ ಕಛೇರಿಯನ್ನು ಸ್ಥಳಾಂತರಿಸಲು ಬಲವಾದ ಕಾರಣಗಳೇನು?

ಈ) ಕೇಂದ್ರ ಕಛೇರಿಯನ್ನು ಸ್ಥಳಾಂತರಿಸದೇ ಹೋದರೆ ಹಂಪಿಯ ಉದ್ಧಾರ ಸಾಧ್ಯವಿಲ್ಲವೇ?

ಉ) ಸ್ಥಳಾಂತರದಿಂದ ತೊಂದರೆಗೊಳಗಾಗುವವರ ಬಗ್ಗೆ ಸರ್ಕಾರದ ನಿಲುವೇನು?

ಶ್ರೀಮತಿ ರಾಣಿ ಸತೀಶ್ (ಕನ್ನಡ ಮತ್ತು ಸಂಸ್ಕೃತಿ ರಾಜ್ಯ ಸಚಿವರು) :

ಅ) ಬಂದಿದೆ. ಸ್ಥಳಾಂತರಿಸಲು ಸರ್ಕಾರ ಆದೇಶವನ್ನು ಹೊರಡಿಸುತ್ತದೆ.

ಆ) ಮೈಸೂರಿನಲ್ಲಿ ಇಲಾಖೆಯ ಉಪನಿರ್ದೇಶಕರ ಕಛೇರಿ ಉಳಿಸಿಕೊಂಡು ಉತ್ತರ ಕರ್ನಾಟಕದ ಭಾಗಕ್ಕೂ ಹೆಚ್ಚಿನ ಆದ್ಯತೆ ನೀಡುವ ದೃಷ್ಟಿಯಿಂದ ಹಾಗೂ ಹಂಪೆಯ ಸ್ಮಾರಕಗಳ ಸಮಗ್ರ, ಸಮರ್ಪಕ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಹಾಗೂ ರಾಜ್ಯದ ಇತರೆ ಸ್ಮಾರಕಗಳ ಹಾಗೂ ವಸ್ತು ಸಂಗ್ರಹಾಲಯಗಳ ಸಮರ್ಪಕ ನಿರ್ವಹಣೆ ದೃಷ್ಟಿಯಿಂದ ಸ್ಥಳಾಂತರಿಸಲು ಕ್ರಮ ತೆಗೆದುಕೊಳ್ಳಲಾಗಿದೆ.

ಈ) ವಿಶ್ವವಿಖ್ಯಾತ ಇತಿಹಾಸ ಪ್ರಸಿದ್ಧ ಹಾಗೂ ವಿಶ್ವಪರಂಪರೆ ನಿವೇಶನವೆಂದು ಘೋಷಿಸಲ್ಪಟ್ಟಿರುವ ಹಂಪಿಯ ಸಂರಕ್ಷಣೆಯನ್ನು ಸಹಾ ಪರಿಗಣಿಸಲಾಗಿದೆ.

ಉ) ಸ್ಥಳಾಂತರದಿಂದ ತೊಂದರೆಗಳು ಸಂಭವವಿರುವುದಿಲ್ಲ. ಆಡಳಿತ ವ್ಯವಸ್ಥೆಯಲ್ಲಿ ವರ್ಗಾವಣೆಗಳು ಅನಿವಾರ್ಯ.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಮಾನ್ಯ ಅಧ್ಯಕ್ಷರೆ, ಸಾಂಸ್ಕೃತಿಕ ರಾಜಧಾನಿ ಮೈಸೂರಿನಿಂದ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಕೇಂದ್ರ ಕಛೇರಿಯನ್ನು ಹಂಪಿಗೆ ಸ್ಥಳಾಂತರಿಸುವ ಸರ್ಕಾರದ ನಿರ್ಧಾರವನ್ನು ಕೈಬಿಡಬೇಕೆಂದು ಮೈಸೂರಿನಲ್ಲಿರುವ ಅನೇಕ ತಜ್ಞರು ಕೇಳಿಕೊಂಡಿದ್ದಾರೆ. ಮಾನ್ಯ ಮಂತ್ರಿಯವರಾದ ಶ್ರೀಮತಿ ರಾಣಿ ಸತೀಶ್ ಅವರು ಕೂಡ ಮೈಸೂರಿನ ಜಿಲ್ಲೆಯವರು. ಮೈಸೂರಿಗೆ ತನ್ನದೇ ಆಗಿರತಕ್ಕಂತಹ ಐತಿಹಾಸಿಕ ಪರಂಪರೆ ಇದೆ. ಅರಸರು ಆಳಿದಂತಹ ಊರು ಮೈಸೂರು. ಮಲ್ಲಿಗೆ ಇಂಪಿನ ಊರು ಮೈಸೂರು. ಶ್ರೀಗಂಧ ಕಂಪಿನ ಊರು ಮೈಸೂರು. ಇಂತೆಲ್ಲಾ ತನ್ನದೇ ಆಗಿರತಕ್ಕಂತಹ ದಾರ್ಶನಿಕತೆಯನ್ನು ಹೊಂದಿರತಕ್ಕಂತಹ ಮೈಸೂರಿನಲ್ಲಿರತಕ್ಕಂತಹ ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯವನ್ನು ಹಂಪಿಗೆ ವರ್ಗಾಯಿಸುವ ನಿರ್ಧಾರ ನಿಜಕ್ಕೂ ಚೆನ್ನಾಗಿಲ್ಲ. ಇದನ್ನು ಒಂದು ಪತ್ರಿಕೆ ಬರೆದಿದೆ. ಪ್ರಾಚ್ಯವಸ್ತು ಮತ್ತು ಸಂಗ್ರಹಾಲಯ ನಿರ್ದೇಶನಾಲಯದ ಸ್ಥಳಾಂತರ ಸರ್ಕಾರದ ತೊಘಲಕ್ ನಿರ್ಧಾರ ಎಂದು ಬರೆದಿದೆ. ಅದರಲ್ಲೂ ನಮ್ಮ ಮಾನ್ಯ ಕೃಷ್ಣ ಅವರು ಸಂಸ್ಕೃತಿಗೆ ಬೆಲೆ ಕೊಡತಕ್ಕಂತಹ ಮಾನ್ಯ ಮುಖ್ಯಮಂತ್ರಿಗಳು. ಅವರಿಗೆ ನಾನು ಒಂದು ಕಾಗದವನ್ನು ಬರೆದಿದ್ದೆ.

ಶ್ರೀ ಎಸ್. ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ತಪ್ಪು ತಿಳಿದುಕೊಳ್ಳುವುದಿಲ್ಲ ಎಂದರೆ ಒಂದು ವಿನಂತಿ ಮಾಡಿಕೊಳ್ಳುತ್ತೇನೆ. ನಿಮ್ಮ ಸ್ಪೀಡ್ ಏನು ಇದೆ, ಅದು ರಾಜಧಾನಿ ಎಕ್ಸ್‌ಪ್ರೆಸ್ ಸ್ಪೀಡ್ ಇದ್ದ ಹಾಗೆ ಅದನ್ನು ನಾವು ಅರ್ಥ ಮಾಡಿಕೊಳ್ಳುವಷ್ಟು ಸ್ಪೀಡಿಗೆ ತಾವು ದಯವಿಟ್ಟು ಮಾತನಾಡಿ. ಮೈಸೂರು ಮೇಲ್ ತರಹ ಮಾತನಾಡಿ.

ಶ್ರೀ ಸಿ. ಭೈರೇಗೌಡ : ಅವರು ಹರಿಕಥೆದಾಸರು!

ಅಧ್ಯಕ್ಷರು : ಅವರು ಹರಿಕಥೆಯನ್ನು ನಿಧಾನವಾಗಿ ಮಾಡುತ್ತಾರೆ!

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಕನ್ನಡವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳದೇ ಇರುವವರು ಎಷ್ಟೋ ಜನ ಇದ್ದಾರೆ. ಚೆನ್ನಾಗಿ ತಿಳಿದುಕೊಂಡವರು ಮಾನ್ಯ ಕೃಷ್ಣ ಅವರೊಬ್ಬರೇ. ಕನ್ನಡ ಮಾತನಾಡದೇ ಇರುವವರೂ ಕೆಲವರು ಇದ್ದಾರೆ. ಏಕೆಂದರೆ ಕನ್ನಡದ ಬಗ್ಗೆ ಕನ್ನಡದ ಕಂಪಿನ ಬಗ್ಗೆ ಮಾನ್ಯ ಕುವೆಂಪು ಅವರು ಹೇಳಿದ್ದಾರೆ. ಆ ಕುವೆಂಪು ಅವರ ಮಾತುಗಳನ್ನು, ಮಾನ್ಯ ಡಿವಿಜಿ ಅವರ ತತ್ವಗಳನ್ನು ಕೇಳಿದಾಗ ಅವೆಲ್ಲ ಎಷ್ಟೊಂದು ಪ್ರಫುಲ್ಲವಾಗಿರುತ್ತವೆ ಮತ್ತು ಅವು ಎಷ್ಟೊಂದು ಮನಸ್ಸಿಗೆ ಆಹ್ಲಾದಕರವಾಗಿರುತ್ತವೆ ಎಂಬುದನ್ನೆಲ್ಲಾ ನಾವು ತಿಳಿದುಕೊಳ್ಳಬೇಕು. ಅದನ್ನು ತಿಳಿದುಕೊಂಡರೆ ಈ ಸಂಸ್ಕೃತಿ ನಮಗೆ ಅರ್ಥ ಆಗುತ್ತದೆ. ಈಗ ನಾನು ಮಾನ್ಯ ಸಂಸ್ಕೃತಿ ಸಚಿವರನ್ನು ಮಾನ್ಯ ಮುಖ್ಯಮಂತ್ರಿಗಳ ಮೂಲಕ ಪ್ರಾರ್ಥಿಸಿಕೊಳ್ಳುವುದೇನೆಂದರೆ, ಮೈಸೂರಿನಲ್ಲಿರತಕ್ಕ ಪ್ರಾಚ್ಯ ವಸ್ತು ಸಂಗ್ರಹಾಲಯವನ್ನು ಹಂಪಿಗೆ ವರ್ಗಾಯಿಸುವುದು ಬೇಡ. ವರ್ಗಾಯಿಸುವುದರಿಂದ ಅನೇಕ ಲಿಖಿತ ದಾಖಲೆಗಳು ಏನಿವೆ ಅವು ಹಾಳಾಗುತ್ತವೆ. ಹಂಪಿಯನ್ನು ಉದ್ಧಾರ ಮಾಡಿ, ಅದು ಸರಿಯಾಗಲಿ. ಯುನೆಸ್ಕೋ ಅವರಿಂದ ಎರಡು ಸೇತುವೆ ಒಡೆಯುವುದಕ್ಕೆ ಆರ್ಡರ್ ಮಾಡಿದ್ದಾರೆ. ಆ ಸೇತುವೆಗಳನ್ನು ಕಟ್ಟಿದ ಮೇಲೆ ಯಾವುದೇ ವಿಧವಾದಂತಹ ಸವಲತ್ತುಗಳು ಇಲ್ಲ. ಇಲ್ಲಿರತಕ್ಕಂತಹ 200 ಜನ ನೌಕರರು ಬೀದಿ ಪಾಲಾಗುತ್ತಾರೆ, ಅದರಲ್ಲಿ ಹೆಣ್ಣು ಮಕ್ಕಳೇ ಜಾಸ್ತಿ ಇದ್ದಾರೆ. ನಾವು ಅದರ ಬಗ್ಗೆ ಗಮನ ಕೊಡುತ್ತೀರಾ? ಸ್ತ್ರೀಶಕ್ತಿ ಎಂದು ಮಾನ್ಯ ಕೃಷ್ಣ ಅವರು ಹೆಸರಿಟ್ಟಿದ್ದಾರೆ. ಸಂಸ್ಕೃತಿಯ ಕಣ್ಣು ಈ ಹೆಣ್ಣು ಸಂಸ್ಕೃತಿ ಬಗ್ಗೆ ಬೇಕಾದಷ್ಟು ತಿಳಿದುಕೊಂಡಿರತಕ್ಕವರು. ಸಂಸ್ಕೃತಿಗೆ ಸ್ತ್ರೀಶಕ್ತಿ ಎಂದು ಹೆಸರು ಕೊಟ್ಟಿರತಕ್ಕಂತಹ ಆ ಕಲೆಯನ್ನು ನಾವು ಅರ್ಥ ಮಾಡಿಕೊಂಡಿದ್ದೇವೆ. ದಯಮಾಡಿ ಇದನ್ನು ಕೈಬಿಡಬೇಕೆಂದು ಮಾನ್ಯ ಮುಖ್ಯಮಂತ್ರಿಗಳಲ್ಲಿ ನಾನು ಕೇಳಿಕೊಳ್ಳುತ್ತೇನೆ. ನೀವು ಕೈಬಿಡುತ್ತೇವೆ ಎಂದು ಹೇಳುವವರೆಗೆ ನಾನು ಬಾವಿಗೆ ಹೋಗಿ ಕುಳಿತುಕೊಳ್ಳುತ್ತೇನೆ.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಅಧ್ಯಕ್ಷರೇ, ನಾನು ಉತ್ತರವನ್ನೇ ಹೇಳಿಲ್ಲ. ಮಾನ್ಯ ಸದಸ್ಯರು ಮೈಸೂರಿನ ಕಂಪಿನ ಬಗ್ಗೆ ಹೇಳಿದರು. ಮೈಸೂರಿನ ಕಂಪನ್ನು ಕರ್ನಾಟಕದಾದ್ಯಂತ ಪಸರಿಸಬೇಕು ಎನ್ನುವಂತಹ ಒಂದು ಇತಿಹಾಸದ ಸಲುವಾಗಿ ನಾವು ಆ ಸ್ಥಳಾಂತರದ ಕ್ರಮವನ್ನು ತೆಗೆದುಕೊಂಡಿದ್ದೇವೆ ಎಂದು ಮಾನ್ಯ ಸದಸ್ಯರು ಗಮನಿಸಬೇಕು. ಇದರ ಬಗ್ಗೆ ಮನವಿ ಬಂದಿದೆಯಾ ಎಂದು ಅವರು ಕೇಳಿದ್ದಾರೆ. ಮನವಿ ಬಂದಿರತಕ್ಕದ್ದು ಆ ಒಂದು ನಿರ್ದೇಶನಾಲಯದಲ್ಲಿ ಕೆಲಸ ಮಾಡುತ್ತಿರತಕ್ಕಂತಹ ನೌಕರವರ್ಗದವರಿಂದ ಎಂಬುದನ್ನು ತಾವು ಗಮನಿಸಬೇಕು. ಯಾವಾಗಲೂ ಇಲಾಖೆಯನ್ನು ನಡೆಸುವಂತಹದು ನೌಕರರ ಹಿತಾಸಕ್ತಿಗೆ ಎಂತಲ್ಲ. ಸಾರ್ವಜನಿಕರ ಹಿತಾಸಕ್ತಿಗೆ, ಇಲಾಖೆಯ ಹಿತಾಸಕ್ತಿಗೆ ನಾವು ನಡೆಸಬೇಕಾಗುತ್ತದೆ. ಅದನ್ನು ತಾವು ಗಮನದಲ್ಲಿಟ್ಟುಕೊಳ್ಳಬೇಕು. ಅವರಿಗಾಗಿ ಇಲಾಖೆ ಇದೆ ಎನ್ನುವುದನ್ನು ಬಿಟ್ಟು ಇಲಾಖೆಗಾಗಿ ಅವರು ಇದ್ದಾರೆ ಎನ್ನುವುದನ್ನು ಗಮನಿಸಿ ಅದರ ಬಗ್ಗೆ ತೊಘಲಕ್ ದರ್ಬಾರ್ ಎಂದು ಹೇಳಿದ್ದಾರೆ. ತೊಘಲಕ್ ದರ್ಬಾರ್ ಯಾವಾಗ ಆಗುತ್ತದೆ ಎಂದರೆ ಅದನ್ನು ನಾನು ಪುನಃ ಸ್ಥಳಾಂತರ ಮಾಡಿದಾಗ ತೊಘಲಕ್ ದರ್ಬಾರ್ ಆಗುತ್ತದೆ ಎನ್ನುವುದನ್ನು ಮಾನ್ಯ ಸದಸ್ಯರು ಗಮನಿಸಬೇಕು.

ಶ್ರೀ ಎಚ್.ಎಸ್. ಶಂಕರಲಿಂಗೇಗೌಡ : ಈ ಬಗ್ಗೆ ನಾವು ಹಲವಾರು ಬಾರಿ ಕೇಳಿಕೊಂಡಿದ್ದೇವೆ. ಇಲ್ಲಿ ಮಾನ್ಯ ರಾಜಾರಾವ್ ಕೂಡ ಅಲ್ಲಿಗೆ ವರ್ಗಾಯಿಸುವುದು ಸರಿ ಇಲ್ಲ ಎಂದು ಹೇಳಿದ್ದಾರೆ. ಇದನ್ನು ನಾನು ಕೂಡ ಹೇಳುತ್ತಿದ್ದೇನೆ. ದೊಡ್ಡ ದೊಡ್ಡ ವಿದ್ವಾಂಸರುಗಳು ಕೂಡ ಹಂಪಿಗೆ ಬದಲಾಯಿಸಬಾರದೆಂದು ಹೇಳಿದ್ದಾರೆ. ತಮ್ಮ ಮುಂದೆ ಆ ಪತ್ರಿಕೆಯನ್ನು ಕಳಿಸಿದ್ದೇನೆ. ದಯಮಾಡಿ ಅದನ್ನು ಮಾನ್ಯ ಮುಖ್ಯಮಂತ್ರಿಗಳು ಓದಬೇಕು. ಓದಿದ ಮೇಲೆ ಸಮಾಧನ ಆದರೆ ನಮಗೆ ಹೇಳಿ. ನಾನು ಅಲ್ಲಿಯವರೆಗೆ ಬಾವಿಯಲ್ಲಿ ಕುಳಿತಿರುತ್ತೇನೆ.

(ಮಾನ್ಯ ಸದಸ್ಯರಾದ ಶ್ರೀ ಎಚ್. ಎಸ್. ಶಂಕರಲಿಂಗೇಗೌಡರು ಬಾವಿಯ ಹತ್ತಿರ ಬಂದರು)

ಅಧ್ಯಕ್ಷರು : ಮಾನ್ಯ ಶಂಕರಲಿಂಗೇಗೌಡರೆ, ತಮ್ಮ ಸಲಹೆಯ ಬಗ್ಗೆ ಸರ್ಕಾರದವರು ಯೋಚನೆ ಮಾಡುತ್ತಾರೆ, ತಾವು ಸುಮ್ಮನಿರಿ.

ಶ್ರೀಮತಿ ರಾಣಿ ಸತೀಶ್ : ಮಾನ್ಯ ಅಧ್ಯಕ್ಷರೆ, ಈ ವಿಚಾರದಲ್ಲಿ ಪರಿಣಿತರ ಅಭಿಪ್ರಾಯವನ್ನು ನಾವು ತೆಗೆದುಕೊಂಡು, ವಿಚಾರಮಾಡಿ ಉಪ ನಿರ್ದೇಶಕರ ಕಛೇರಿಯನ್ನು ಸ್ಥಳಾಂತರಿಸಿದ್ದು ಎಂದು ಮಾನ್ಯ ಸದಸ್ಯರಿಗೆ ನಾನು ತಿಳಿಸಬಯಸುತ್ತೇನೆ.

ಅಧ್ಯಕ್ಷರು : ಮಾನ್ಯ ಸುರೇಶ್ ಕುಮಾರ್ ಅವರೇ, ತಮ್ಮ ಪ್ರಶ್ನೆಗೆ ಉತ್ತರ ಇನ್ನೂ ಬಂದಿಲ್ಲ.

ಶ್ರೀ ಎಸ್. ಸುರೇಶ್ ಕುಮಾರ್ : ಉತ್ತರ ಇನ್ನೂ ಏಕೆ ಬಂದಿಲ್ಲ ಎಂದು ಕೇಳಬಹುದು?

ಅಧ್ಯಕ್ಷರು : ಅದು ಬೇಡ, ನಾವು ಮುಂದಿನ ಸೋಮವಾರ ಆ ಪ್ರಶ್ನೆಯನ್ನು ತೆಗೆದುಕೊಳ್ಳೋಣ.

ಶ್ರೀ ಎಸ್. ಸುರೇಶ್ ಕುಮಾರ್ : ಮಾನ್ಯ ಅಧ್ಯಕ್ಷರೆ, ಒಂದು ವಿಚಾರವನ್ನು ತಮ್ಮ ಗಮನಕ್ಕೆ ತರುತ್ತಿದ್ದೇನೆ. ಇದು ಬಹಳ ವ್ಯವಸ್ಥಿತವಾಗಿ ಈ ಪೊಲ್ಯೂಷನ್ ಕಂಟ್ರೋಲ್ ಬೋರ್ಡ್ ಬಗ್ಗೆ ಇರುವ ಈ ಪ್ರಶ್ನೆಯನ್ನು ಅವಾಯ್ಡ್ ಮಾಡುತ್ತಿದ್ದಾರೆ. ತಾವೇ ಹಿಂದೆ ರೂಲ್ಸ್ 69ರ ಪ್ರಕಾರ ಅಲ್ಪಾವಧಿ ಚರ್ಚೆಗೆ ಅವಕಾಶವನ್ನು ಕೊಟ್ಟಿದ್ದೀರಿ. ಆಗಲೂ ಕೂಡ ಅದನ್ನು ಅವಾಯ್ಡ್ ಮಾಡಲಾಯಿತು. ಈಗ ತಮ್ಮ ರೂಲ್ಸ್ ಪ್ರಕಾರ 15 ದಿವಸಗಳ ಮುಂಚೆ ಪ್ರಶ್ನೆ ಕೊಟ್ಟಿದ್ದೇನೆ. ನಮ್ಮ ಪ್ರಶ್ನೆ ನಿನ್ನೆ ಲಾಟರಿಯಲ್ಲಿ ಬಂತು, ಲಾಟರಿ ಬರುವುದಕ್ಕೂ ಸ್ಟಾರ್ ಇರಬೇಕು. ಆದರಲ್ಲಿ ಪ್ರಶ್ನೆ ಬಂದಾಗ ಈ ಒಂದು ಪ್ರಶ್ನೆಗೆ ಉತ್ತರ ಏಕೆ ಬರಲಿಲ್ಲ?

ಅಧ್ಯಕ್ಷರು : ಮುಂದಿನ ಸೋಮವಾರ ಆ ಪ್ರಶ್ನೆ ಬರುವಾಗ ಹಾಗೆ ಮಾಡುತ್ತೇನೆ.

ಶ್ರೀ ಕೆ.ಎಚ್. ರಂಗನಾಥ್ : ಉತ್ತರಗಳನ್ನು ಒದಗಿಸಲಾಗಿದೆ.

ಶ್ರೀ ಎಸ್. ಸುರೇಶ್ ಕುಮಾರ್ : ನನಗೆ ಉತ್ತರಗಳು ಬಂದಿಲ್ಲ.

ಅಧ್ಯಕ್ಷರು : ಉತ್ತರ ಬಂದಿದೆ. ಮುಂದಿನ ಸೋಮವಾರಕ್ಕೆ ಅದನ್ನು ತೆಗೆದುಕೊಳ್ಳೋಣ.